ಹೋಲ್ಡರ್‌ಗಳಿಗೆ ಮೂಲ ವೇತನ ರೂ. 3000 ನೀಡಬೇಕಾಗುವುದು. ಸಿನಿಮಾ ಆಪರೇಟರ್ ಪಾಸಾದವರಿಗಾದರೆ ರೂ2000 ವೇತನ ನೀಡಿದರೆ ಸಾಕಾಗುವುದು. ವಾರ್ತಾ ಮತ್ತು ಪ್ರಚಾರ ಇಲಾಖೆ ಶಿಕ್ಷಣ ಇಲಾಖೆಗಳಲ್ಲಿ ಕೂಡಾ ಸಿನಿಮಾ ಆಪರೇಟರ್ ಪಾಸು ಮಾಡಿದ ಎಷ್ಟೋ ಜನರನ್ನು 16 ಎಂ.ಎಂ. ಪ್ರೊಜೆಕ್ಟರ್ ಹ್ಯಾಂಡಲ್ ಮಾಡಲು ನೇಮಕಾತಿ ಮಾಡಲಾಗಿದೆ. ಕುಟುಂಬ ಕಲ್ಯಾಣ ಪ್ಲಾನಿಂಗ್ ಬ್ಯೂರೋದಲ್ಲಿ ಮಾತ್ರ ಈ ಆಪರೇಟರ್‌ಗಳನ್ನು ನೇಮಕ ಮಾಡಲು ಇರುವ ತಾರತಮ್ಯವನ್ನು ಹೋಗಲಾಡಿಸಿ, ಸಿಮಿನಾ ಪ್ರೊಜೆಕ್ಟ್ ಆಪರೇಟರ್ ಪಾಸು ಮಾಡಿದವರನ್ನು ನೇಮಕಾತಿ ಮಾಡುವುದು ಹಾಗೂ ಗ್ರಾಮೀಣ ಆರೋಗ್ಯ ಕಾರ್ಯಕರ್ತರುಗಳನ್ನು ಕೂಡಲೇ ನೇಮಕ ಮಾಡಲು ಕ್ರಮ ಕೈಗೊಳ್ಳುವಂತೆ ಈ ಮೂಲಕ ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಸಭಾದ್ಯಕ್ಷೆಯರೇ ತಮ್ಮ ಅನುಮತಿ ಪಡೆದು ಈ ಕೆಳಕಂಡ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 615 ಕಿರಿಯ ಆರೋಗ್ಯ ಕಾರ್ಯಕರ್ತರ ಹುದ್ದೆಗಳು ಖಾಲಿ ಇದ್ದು ಅವುಗಳಲ್ಲಿ 307 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ನಿರ್ಣಯಿಸಲಾಗಿದೆ. ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಇಲಾಖಾ ನೇಮಕಾತಿ ಸಮಿತಿಯನ್ನು ರಚಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಈ ಇಲಾಖೆಯಲ್ಲಿ ಈಗಿನ ವ್ಯಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಪ್ರೊಜೆಕ್ಷನಿಸ್ಟ್ ಹುದ್ದೆಗೆ ಡಿಪ್ಲೊಮಾ ಪದವಿಯನ್ನು ಪಡೆದವರಿಗೆ ಮಾತ್ರ ನೇಮಿಸಬಹುದಾಗಿದೆ. ಸಿನಿಮಾ ಆಪರೇಟಿಂಗ್ ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳನ್ನು ನೇಮಕ ಮಾಡುವುದಕ್ಕೆ ಸಾಧ್ಯವಾಗುವಂತೆ ನಿಯಮಗಳನ್ನು ಮಾರ್ಪಡಿಸುವ ವಿಚಾರವನ್ನು ಪರಿಶೀಲಿಸಲಾಗುವುದು.

6) ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಪನ್ಯಾಸಕರುಗಳ ನೇಮಕಾತಿ

SMT. DAMAYANTHI BOREGOWDA : The vacancies in the Ist grade colleges in the State are about 800. The students of the smaller towns go to the City Colleges because their town colleges do not have the required number of teaching staff. The Government has closed the First Grade Colleges where the students strength is very poor. Such colleges should be closed and the staff posted to bigger colleges or lecturers should be appointed for all the Vacancies. I request the Hon'ble Minister for Education to do the needful for appointment of Lecturers.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷೆಯರೇ, ಮೇಲ್ಕಂಡ ಸೂಚನೆಗೆ ಈ ಕೆಳಗಿನ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ.

The vacancy position in various Government First Grade Colleges in the State is as follows:

(1) Professors	6 posts
(2) Readers	251
(3) Lecturers	14
	Total 271

Besides, it is, assussed that there is need for creation of 518 additional posts of lecturers in Government Colleges. Apart from this, it is also felt that about 550 posts of lecturers be filled in various private aided Colleges. However, in order to cope with the teaching work in the Colleges, qualified and eligible Part time lecturers have been appointed.

It has not come to the notice of Government that students of smaller towns go to the city Colleges because their town Colleges do not have the required number of teaching staff. However, the matter regarding filling the above vacancies and also creation of additional posts of lecturers is being exemined by the Government.

Further, Government had identified that there were seven first grade Colleges (Six Government and one Private aided College) which had student strength of less than 100 during 1989-90. Whether there would be improvement in the student strenth of these Colleges is being watched by the Government. The matter regarding continuing or otherwise of these Colleges will be further examined during 1991-92.

7) ಕಾಫಿ ಕಾರ್ಮಿಕರಿಗೆ ಪರಿಷ್ಕೃತ ವೇತನ ನಿಗದಿಪಡಿಸುವುದು.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ ಚಿಕ್ಕಮಂಗಳೂರು ಜಿಲ್ಲೆ ಕೊಡಗು ಜಿಲ್ಲೆ ಹಾಸನ ಜಿಲ್ಲೆಗಳು ಕಾಫಿ ತೋಟಗಳನ್ನು ಹೊಂದಿದ್ದು ಸಾವಿರಾರು ಮಂದಿ ಕಾಫಿ ಕೂಲಿಕಾರ್ಮಿಕರು ಈ ಜಿಲ್ಲೆಯಲ್ಲಿ ಕಾಫಿ ಕಾರ್ಮಿಕರಾಗಿ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿರುತ್ತಾರೆ. ಸರ್ಕಾರ ಇವರ ಎಳಿಗೆಗಾಗಿ ಐದು ವರ್ಷಕ್ಕೊಮ್ಮೆ ಕಾರ್ಮಿಕರ ಕಾಯ್ದೆಗೆ ಅನುಸಾರವಾಗಿ ಪರಿಷ್ಕೃತ ವೇತನ ನಿಗಧಿ ಮಾಡಲಾಗುತ್ತಿದೆ. ಅಂತೆಯೇ ಈ ವರ್ಷವೂ ಈಗಾಗಲೇ ಪರಿಷ್ಕೃತ ವೇತನ ನಿಗಧಿ ಮಾಡಬೇಕಾಗಿತ್ತು ಆದರೆ ಇನ್ನೂ ಮಾಡಿಲ್ಲ. ಈ ಬಗ್ಗೆ ಕಾರ್ಮಿಕ ಇಲಾಖೆಯು ಗಮನ ಹರಿಸಿಲ್ಲ. ಇದು ಬಹಳ ಸೋಚನೀಯವಾದ ಸಂಗತಿ. ಬಹಳ ಕಾರ್ಮಿಕ ಸಂಘಗಳು ಈ ಬಗ್ಗೆ ಅಸಮಾಧಾನ ಹೊಂದಿ ಪತ್ರ ಬರೆದಿರುತ್ತಾರೆ. ಈ ಕೂಡಲೇ ಈ ಸಾರಿಯ ಪರಿಷ್ಕೃತ ವೇತನ ನಿಗಧಿ ಮಾಡಬೇಕೆಂದು ಸರ್ಕಾರವನ್ನು ಅಗ್ರಹಪಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ ಮಾನ್ಯ ಕಾರ್ಮಿಕ ಸಚಿವರ ಪರವಾಗಿ ಈ ಹೇಳಿಕೆ ನೀಡುತ್ತೇನೆ.

ಸಿಂಕೋನ, ರಬ್ಬರ್, ಟೀ ಅಥವಾ ಕಾಫಿ ತೋಟಗಳಲ್ಲಿ ಕೆಲಸ ಮಾಡುವ ಕೆಲಸಗಾರರ ವೇತನವನ್ನು ಈ ಹಿಂದೆ 26-6-84ರಲ್ಲಿ ಪರಿಷ್ಕರಿಸಲಾಗಿತ್ತು. ಸದರಿ ಸರ್ಕಾರಿ ಅಧಿಸೂಚನೆಯಂತೆ ಕನಿಷ್ಟ ವೇತನ ದರಗಳು ಕೆಳಗಿನಂತೆ ಇವೆ.

<u>ಸಿಂಕೋನ ಟಿ ಕಾಫೀ ಅಥವಾ ಮಿಶ್ರ ತೋಟಗಳು.</u>

1. ಮಜ್ದೂರ್	ರೂ.9-35 ಪ್ರತಿ ದಿನ
2. ಸೂಪರ್‌ವೈಜರ್/ ಮೇಸ್ತ್ರಿ	ರೂ.310.00 ಮಾಹೆಯಾನ.